# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ 28.12.2018ರಂದು ಪೂರ್ವಾಹ್ನ 10.30 ಗಂಟೆಗೆ ಜರುಗಿದ ಸಿಂಡಿಕೇಟಿನ ಎಂಟನೇ ಸಾಮಾನ್ಯ ಸಭೆಯ ನಡವಳಿಗಳು.

ಹಾಜರಿದ್ದ ಸದಸ್ಯರು:

1. ಪ್ರೊ. ಜಿ.ಹೇಮಂತಕುಮಾರ್ – ಕುಲಪತಿಗಳು ಹಾಗೂ ಅಧ್ಯಕ್ಷರು
2. ಪ್ರೊ. ಆಯಿಷಾ ಎಂ.ಷರೀಫ್ – ಸದಸ್ಯರು
3. ಕು. ಸಹನಾ ಶಿವಪ್ಪ – ಸದಸ್ಯರು
4. ಶ್ರೀ ಅಶ್ವಥನಾರಾಯಣ – ಸದಸ್ಯರು
5. ಡಾ. ರಾಜಗೋಪಾಲ್ – ಸದಸ್ಯರು
6. ಶ್ರೀ ಕೆ.ಟಿ.ಅಪ್ಪಾಜಪ್ಪ – ಸದಸ್ಯರು
7. ಡಾ. ಎಂ.ಪ್ರೀತಿ – ಸದಸ್ಯರು
8. ಪ್ರೊ. ಜೆ. ಸೋಮಶೇಖರ್ – ಸದಸ್ಯರು
   ಕುಲಸಚಿವ(ಪರೀಕ್ಷಾಂಗ)
9. ಪ್ರೊ. ಆರ್.ರಾಜಣ್ಣ – ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು

ಹಾಜರಾಗದ ಸದಸ್ಯರು:

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ಕರ್ನಾಟಕ ಸರ್ಕಾರ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಮೊದಲಿಗೆ ಮಾನ್ಯ ಕುಲಸಚಿವರು, ಸಿಂಡಿಕೇಟ್‌ನ ಎಂಟನೇ ಸಾಮಾನ್ಯ ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸಿದರು ಹಾಗೂ ಹೊಸದಾಗಿ ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿ ನಾಮನಿರ್ದೇಶನಗೊಂಡಿರುವ (1) ಶ್ರೀ ಅಶ್ವಥನಾರಾಯಣ, ಪ್ರಾಂಶುಪಾಲರು, ನಿಸರ್ಗ ಕಾಲೇಜ್ ಆಫ್ ಮ್ಯಾನೇಜ್‌ಮೆಂಟ್, ಕೊಳ್ಳೇಗಾಲ, ಚಾಮರಾಜನಗರ ಜಿಲ್ಲೆ ಹಾಗೂ (2) ಶ್ರೀ ಕೆ.ಟಿ.ಅಪ್ಪಾಜಪ್ಪ, ಪ್ರಾಂಶುಪಾಲರು, ಬಿ.ಹೆಚ್.ಮಂಗೇಗೌಡ ಪ್ರಥಮದರ್ಜೆ ಕಾಲೇಜು, ಬೆಸಗರಹಳ್ಳಿ, ಮದ್ದೂರು ತಾಲ್ಲೂಕು, ಮಂಡ್ಯಜಿಲ್ಲೆ ಈ ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿ ಪರಿಚಯಿಸಲಾಯಿತು.

ಹಾಗೆಯೇ, ಸಿಂಡಿಕೇಟ್ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಈ ಕೆಳಕಂಡ ಸದಸ್ಯರುಗಳ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

(1) ಪ್ರೊ. ಎಸ್.ಎಲ್.ಸುರೇಶ್, ಪ್ರಾಂಶುಪಾಲರು, ಭಾರತೀ ಶಿಕ್ಷಣ ಕಾಲೇಜು, ಭಾರತೀನಗರ, ಕೆ.ಎಂ.ದೊಡ್ಡಿ, ಮದ್ದೂರು ತಾಲ್ಲೂಕು, ಮಂಡ್ಯಜಿಲ್ಲೆ.

(2) ಡಾ. ಎ.ಟಿ.ಶಿವರಾಮು, ಪ್ರಾಂಶುಪಾಲರು, ಬಿ.ಜಿ.ಎಸ್. ಶಿಕ್ಷಣ ಮಹಾವಿದ್ಯಾಲಯ, ಶ್ರೀ ಆದಿಚುಂಚನಗಿರಿ ಕ್ಷೇತ್ರ, ನಾಗಮಂಗಲ ತಾಲ್ಲೂಕು, ಮಂಡ್ಯಜಿಲ್ಲೆ.

ನಂತರ ಮಾನ್ಯ ಕುಲಸಚಿವರು, ಕಾರ್ಯಸೂಚಿಯಂತೆ ಸಭೆಯಲ್ಲಿ ಮಂಡಿಸಲಾಗಿರುವ ವಿಷಯಗಳ ಬಗ್ಗೆ ವಿಷಯ ಮಂಡನೆ ಮಾಡಲು ಸಭೆಯ ಅನುಮತಿ ಕೋರಿದರು.

ನಂತರ ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳಲಾಯಿತು.

| | |
|---|---|
| **ವಿಷಯ ಸಂಖ್ಯೆ : I** | ದಿನಾಂಕ 05-12-2018ರಂದು ನಡೆದ ಸಿಂಡಿಕೇಟಿನ ಏಳನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಬಗ್ಗೆ |
| ತೀರ್ಮಾನ | ದಿನಾಂಕ 05-12-2018ರಂದು ನಡೆದ ಸಿಂಡಿಕೇಟಿನ ಏಳನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸಲಾಯಿತು. |
| **ವಿಷಯ ಸಂಖ್ಯೆ : II** | ದಿನಾಂಕ 05-12-2018ರಂದು ನಡೆದ ಸಿಂಡಿಕೇಟಿನ ಏಳನೇ ಸಾಮಾನ್ಯ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಕ್ರಮಕೈಗೊಂಡ ವರದಿ. |
| ತೀರ್ಮಾನ | ಏಳನೇ ಸಾಮಾನ್ಯ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಕ್ರಮಕೈಗೊಂಡ ವರದಿಯನ್ನು ಗಮನಿಸಲಾಯಿತು. |
| **2018/12.1** | ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದಲ್ಲಿ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಮುಂದುವರೆಸುವ ಬಗ್ಗೆ. |
| ತೀರ್ಮಾನ | ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಚಂದ್ರಶೇಖರಯ್ಯ ಇವರನ್ನು ಮತ್ತೊಂದು ವರ್ಷದ ಅವಧಿಗೆ ಮುಂದುವರೆಸಲು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ವಿಭಾಗೀಯ ಪರಿಷತ್ ಶಿಫಾರಸ್ಸು ಮಾಡಿರುವುದರಿಂದ ರೂ. 25,000/-ಗಳ ಗೌರವ ಸಂಭಾವನೆಯೊಂದಿಗೆ ಡಾ. ಚಂದ್ರಶೇಖರಯ್ಯ ಅವರನ್ನು ಮತ್ತೊಂದು ವರ್ಷದ ಅವಧಿಗೆ ಆಹ್ವಾನಿಸಲು ಸಿಂಡಿಕೇಟ್ ಅನುಮೋದಿಸಿತು. |
| **2018/12.2** | 1. ಮೈಸೂರು ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದು ನಡೆಸಲಾಗುತ್ತಿರುವ ಸ್ಪೆಷಲೈಸ್ಡ್ ಪ್ರೋಗ್ರಾಂ ಹಾಗೂ ಸಂಶೋಧನಾ ಕೇಂದ್ರಗಳ ಮಾನ್ಯತೆಯ ಬಗ್ಗೆ ತಾಂತ್ರಿಕ ವಿಷಯಗಳಲ್ಲಿನ ಸ್ಪಷ್ಟತೆಗಾಗಿ ರಚಿತವಾಗಿದ್ದ ಉಪಸಮಿತಿಯ ನಡಾವಳಿಗೆ ಅನುಮೋದನೆ ಕೋರಿ.<br>2. ಮೈಸೂರು ವಿಶ್ವವಿದ್ಯಾನಿಲಯದ ಸಂಶೋಧನಾ ಕೇಂದ್ರಗಳಿಗೆ ಮಾನ್ಯತೆ/ ನವೀಕರಣ ಮಾನ್ಯತೆ ನೀಡುವ ಕುರಿತು ಮಾರ್ಗಸೂಚಿಯಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಲು ರಚಿಸಲಾಗಿದ್ದ ಸಮಿತಿಯ ನಡಾವಳಿ ಹಾಗೂ ಕರಡು MoU ಅನುಸಮರ್ಥನೆಗೆ. |
| ತೀರ್ಮಾನ | ಈಗಾಗಲೇ ಕುಲಸಚಿವ(ಪರೀಕ್ಷಾಂಗ) ಅವರ ನೇತೃತ್ವದಲ್ಲಿ ರಚಿತವಾಗಿದ್ದ ಸಮಿತಿಯು ಸಿದ್ಧಪಡಿಸಿರುವ ನಡಾವಳಿಯನ್ನು ಗಮನಿಸಲಾಯಿತು. ಮೈಸೂರು |

| | |
|---|---|
| | ವಿಶ್ವವಿದ್ಯಾನಿಲಯ ಗ್ರೇಡ್–2 ವಿಶ್ವವಿದ್ಯಾನಿಲಯವಾಗಿರುವುದರಿಂದ ಆನ್‌ಲೈನ್ ಕೋರ್ಸ್ ಹಾಗೂ ಔಟ್‌ರೀಚ್ ಕೋರ್ಸ್‌ಗಳನ್ನು ಪ್ರಾರಂಭಿಸುವ ಸಂಬಂಧ ಸ್ವಾಯತ್ತತೆಯಿರುವುದರಿಂದ ಮತ್ತು ಇನ್ನೂ ಕೆಲವು ಅಂಶಗಳನ್ನು ಸೇರ್ಪಡೆ ಮಾಡಿಕೊಳ್ಳುವ ದೃಷ್ಟಿಯಿಂದ ವಿಷಯವನ್ನು ಮುಂದೂಡಲು ಸಿಂಡಿಕೇಟ್ ನಿರ್ಧರಿಸಿತು. ಮತ್ತು ನಡಾವಳಿಯನ್ನು ಪುನರ್‌ಪರಿಶೀಲಿಸುವ ಸಲುವಾಗಿ ಕುಲಸಚಿವ(ಪರೀಕ್ಷಾಂಗ) ಅವರ ಅಧ್ಯಕ್ಷತೆಯಲ್ಲೇ ಕೆಲವು ಡೀನರನ್ನು ಸಹ ಸದಸ್ಯರನ್ನಾಗಿ ಸೇರ್ಪಡೆಮಾಡಿಕೊಂಡು ಸಮಿತಿಯನ್ನು ರಚಿಸಲು ಸಿಂಡಿಕೇಟ್ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು. |
| **2018/12.3** | St. Philomena's College (Autonomous), Bannimantap, Mysuru ಇಲ್ಲಿಗೆ ವಿವಿಧ ವಿಷಯಗಳಲ್ಲಿ ಸಂಶೋಧನಾ ಕೇಂದ್ರದ ಮಾನ್ಯತೆ ನೀಡುವ ಬಗ್ಗೆ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ಶಿಫಾರಸ್ಸಿಗೆ ಅನುಮೋದನೆ ಕೋರಿ. |
| ತೀರ್ಮಾನ | 2018-19ನೇ ಸಾಲಿಗೆ St. Philomena's College (Autonomous), Bannimantap, Mysuru ಇಲ್ಲಿಗೆ Commerce ವಿಷಯ ಹೊರತುಪಡಿಸಿ Chemistry, Journalism and Mass Communication, Physics and Social Work ವಿಷಯಗಳಲ್ಲಿ ಸಂಶೋಧನಾ ಕೇಂದ್ರದ ಮಾನ್ಯತೆ ನೀಡುವ ಬಗ್ಗೆ ಪರಿವೀಕ್ಷಣಾ ಸಮಿತಿ ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿರುವ ಶಿಫಾರಸ್ಸನ್ನು ಸಿಂಡಿಕೇಟ್ ಅನುಮೋದಿಸಿತು. |
| **2018/12.4** | ಹೆಚ್ಚುವರಿ ಸಂಶೋಧನಾ ಅವಧಿ ವಿಸ್ತರಣೆ ಕೋರಿರುವ ಬಗ್ಗೆ. |
| | ಡಾ. ಪೂರ್ಣಿಮಾ ಕೌಲ್ ಮತ್ತು ಟೆಕ್ನಾಲಜಿ ವಿಭಾಗ, ಸಿ.ಎಫ್.ಟಿ.ಆರ್.ಐ, ಮೈಸೂರು ಇವರ ಮಾರ್ಗದರ್ಶನದಲ್ಲಿ ಶ್ರೀ ಎಸ್.ವಿ.ವಿಶ್ವನಾಥ್‌ರವರು ಸಂಶೋಧನೆ ಕೈಗೊಂಡಿದ್ದು ಇವರು ವಿಶ್ವವಿದ್ಯಾನಿಲಯಕ್ಕೆ ಮಹಾಪ್ರಬಂಧವನ್ನು ಸಲ್ಲಿಸಿರುತ್ತಾರೆಂದು ಕುಲಸಚಿವ (ಪರೀಕ್ಷಾಂಗ) ಅವರು ಸಿಂಡಿಕೇಟ್ ಸಭೆಗೆ ಮಾಹಿತಿ ನೀಡಿದರು. |
| ತೀರ್ಮಾನ | ಡಾ. ಎಸ್.ಮಹದೇವಮೂರ್ತಿ, ಸೂಕ್ಷ್ಮಜೀವಾಣುಶಾಸ್ತ್ರ ವಿಭಾಗ, ಯುವರಾಜ ಕಾಲೇಜು, ಮೈಸೂರು ಇವರ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡಿರುವ ಎಂ.ಎಸ್.ಶೋಭ ಅವರು ವೈಯಕ್ತಿಕ ಸಮಸ್ಯೆ ಮತ್ತು ವೃತ್ತಿಯ ಒತ್ತಡದಿಂದ ಹಾಗೂ ಸಂಶೋಧನೆಗೆ ಸಂಬಂಧಪಟ್ಟ ಒಂದು ಸಂಶೋಧನಾ ಪ್ರಕಟಣೆ ಇನ್ನೂ ಪ್ರಕಟವಾಗಿರುವುದಿಲ್ಲವೆಂಬ ಕಾರಣವನ್ನು ಉಲ್ಲೇಖಿಸಿ ಹೆಚ್ಚುವರಿ ಕಾಲಾವಕಾಶ ನೀಡುವಂತೆ ಸಲ್ಲಿಸಿರುವ ಅವರ ಮನವಿಯನ್ನು ಪರಿಗಣಿಸಿದ ಸಿಂಡಿಕೇಟ್, ಸಭೆಯು ನಡೆದ ದಿನಾಂಕದಿಂದ ಮೂರು ತಿಂಗಳ ಅವಧಿಯವರೆಗೆ ರೂ. 25,000/- ದಂಡಶುಲ್ಕವನ್ನು ಪಾವತಿಸಿಕೊಂಡು ಅನುಮತಿ ನೀಡುವಂತೆ ತೀರ್ಮಾನಿಸಿತು.<br>ಮುಂದುವರೆದು, ಪಿಎಚ್.ಡಿ. ನಿಯಮಾನುಸಾರ ಹೆಚ್ಚುವರಿ ಕಾಲಾವಕಾಶ ನೀಡಲು ಬರುವುದಿಲ್ಲವಾದ್ದರಿಂದ ಈ ಹಿಂದಿನ ಎರಡು ವರ್ಷಗಳಲ್ಲಿ ಯಾವ್ಯಾವ ಕಾರಣಕ್ಕಾಗಿ ಎಷ್ಟು ಜನರಿಗೆ ಎಷ್ಟು ದಂಡ ವಿಧಿಸಿ ಅವಕಾಶ ನೀಡಲಾಗಿದೆ ಎಂಬ ಕಾರಣಗಳೊಂದಿಗೆ ವರದಿಯನ್ನು ಸಲ್ಲಿಸಲು ಒಂದು |

| | |
|---|---|
| | ಸಮಿತಿಯನ್ನು ರಚಿಸುವ ಸಲುವಾಗಿ ಮಾನ್ಯ ಕುಲಪತಿಗಳಿಗೆ ಸಿಂಡಿಕೇಟ್ ಅಧಿಕಾರ ನೀಡಿತು ಮತ್ತು ಸಂಶೋಧನೆ ಕೈಗೊಳ್ಳಲು ವಿಶ್ವವಿದ್ಯಾನಿಲಯದಲ್ಲಿನ ಅರ್ಹವಿದ್ಯಾರ್ಥಿಗಳಿಗೆ ಖಾಯಂ ಅಧ್ಯಾಪಕರ ಕೊರತೆಯಿಂದಾಗಿ ಮಾರ್ಗದರ್ಶಕರ ಬಳಿ ಅವಕಾಶ ಕಲ್ಪಿಸಲು ಸಾಧ್ಯವಾಗುತ್ತಿಲ್ಲವಾದ್ದರಿಂದ ನಿಯಮಾನುಸಾರ ಕಾಲಮಿತಿಯೊಳಗೆ ಮಹಾಪ್ರಬಂಧವನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಹಾಗೂ ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಮಾನ್ಯತೆ ಹೊಂದಿರುವ ಶಿಕ್ಷಣ ಸಂಸ್ಥೆಗಳಲ್ಲೂ ವಿಶ್ವವಿದ್ಯಾನಿಲಯದ ಅರ್ಹ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲು ಅನುವಾಗುವಂತೆ ಅಗತ್ಯ ಅಂಶಗಳೊಂದಿಗೆ ಒಂದು ಸುತ್ತೋಲೆಯನ್ನು ಹೊರಡಿಸಲು ಹಾಗೂ ಸಂಶೋಧನಾ ಮಾನ್ಯತೆ ನೀಡುವಾಗ ಸಂಸ್ಥೆಗಳಿಗೆ ಅರ್ಹವಿದ್ಯಾರ್ಥಿಗಳು ಸಂಶೋಧನೆ ಕೈಗೊಳ್ಳಲು ಸಹಾಯ–ವಾಗುವಂತೆ ಸೂಕ್ತ ಷರತ್ತು ವಿಧಿಸುವಂತೆ ಸಿಂಡಿಕೇಟ್ ತೀರ್ಮಾನಿಸಿತು. |
| **2018/12.5** | ಯೋಜನೆ, ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳಿಗೆ ಸದಸ್ಯರುಗಳ ನಾಮನಿರ್ದೇಶನದ ಶಿಫಾರಸ್ಸುಗಳನ್ನು ಅನುಮೋದನೆ ಪಡೆಯುವುದರ ಬಗೆಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000 ಪ್ರಕರಣ 35(2)(ಡಿ) ಪ್ರಕಾರ ಒಂದು ವರ್ಷದ ಅವಧಿಗೆ (1) ಪ್ರೊ. ಆಯಿಷಾ ಎಂ.ಷರೀಫ್, ವಾಣಿಜ್ಯ ನಿಕಾಯದ ಡೀನರು (2) ಪ್ರೊ. ಎಂ.ಮಹಾದೇವ, ಕಲಾ ನಿಕಾಯದ ಡೀನರು ಹಾಗೂ 35(2)(ಇ) ಪ್ರಕಾರ ಎರಡು ವರ್ಷದ ಅವಧಿಗೆ ಇಬ್ಬರು ಹಿರಿಯ ಪ್ರಾಧ್ಯಾಪಕರುಗಳಾದ (1) ಪ್ರೊ. ಬಸವರಾಜಪ್ಪ.ಹೆಚ್.ಟಿ., ಭೂ ವಿಜ್ಞಾನ ಅಧ್ಯಯನ ವಿಭಾಗ ಮತ್ತು (2) ಪ್ರೊ. ಎನ್.ಎಂ.ತಳವಾರ್, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಇವರುಗಳನ್ನು ಯೋಜನೆ, ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳಿಗೆ ಮಾನ್ಯ ಕುಲಪತಿಗಳು ನಾಮನಿರ್ದೇಶಿಸಿ ಶಿಫಾರಸ್ಸು ಮಾಡಿರುವುದನ್ನು ಸಿಂಡಿಕೇಟ್ ಅನುಮೋದಿಸಿತು. |
| **2018/12.6** | ಮನಃಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಿಸುವ ಸಂಬಂಧ |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34(7)ರ ಪ್ರಕಾರ ನೇಮಕಗೊಂಡಿದ್ದ ಪ್ರೊ. ಜಿ.ವೆಂಕಟೇಶ್ ಕುಮಾರ್, ಪ್ರಾಧ್ಯಾಪಕರು ಇವರ ಅವಧಿಯು ದಿನಾಂಕ 31–12–2018ಕ್ಕೆ ಅಂತ್ಯಗೊಳ್ಳಲಿದ್ದು ಇವರ ನಂತರ ವಿಭಾಗದಲ್ಲಿ ಮತ್ಯಾರೂ ಪ್ರಾಧ್ಯಾಪಕ/ಸಹಪ್ರಾಧ್ಯಾಪಕರಿಲ್ಲದೇ ಇರುವುದರಿಂದ ಜೇಷ್ಠತೆಯ ಪಟ್ಟಿಯಲ್ಲಿ ಹಿರಿಯರಾಗಿರುವ ಡಾ. ಸಂಪತ್ತಕುಮಾರ, ಸಹಾಯಕ ಪ್ರಾಧ್ಯಾಪಕರು ಅವರನ್ನು 01–01–2019ರಿಂದ ಜಾರಿಗೆ ಬಂದಂತೆ 2 ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ವಿಭಾಗಾಧ್ಯಕ್ಷರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/12.7** | ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಿಗೆ ಕಂಪ್ಯೂಟರ್, ಸಿಸಿಟಿವಿ ಕ್ಯಾಮರಾಗಳು, ಪ್ರಿಂಟರ್, ಪ್ರೊಜೆಕ್ಟರ್, ಇಂಟರ್‌ನೆಟ್ ಹಾಗೂ ಇನ್ನಿತರ ಸೌಲಭ್ಯಗಳನ್ನು ಒದಗಿಸುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಿಗೆ ಕಂಪ್ಯೂಟರ್, ಸಿಸಿಟಿವಿ ಕ್ಯಾಮರಾಗಳು, ಪ್ರಿಂಟರ್, ಪ್ರೊಜೆಕ್ಟರ್, ಇಂಟರ್‌ನೆಟ್ ಹಾಗೂ ಇನ್ನಿತರ ಸೌಲಭ್ಯಗಳನ್ನು ನಿಯಮಾನುಸಾರ 'E-procurement Portal' ಮುಖೇನ |

| | |
|---|---|
| | ಕ್ರಮಕೈಗೊಂಡು ಸದರಿ ವೆಚ್ಚವನ್ನು I.I.D.F. ಖಾತೆಯಿಂದ ಭರಿಸಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2018/12.8** | ಪಿರಿಯಾಪಟ್ಟಣ ಯಜಮಾನ ಪ್ರಥಮ ದರ್ಜೆ ಕಾಲೇಜನ್ನು ಮುಚ್ಚುವ ಬಗೆಗೆ |
| ತೀರ್ಮಾನ | ಪಿರಿಯಾಪಟ್ಟಣ ಯಜಮಾನ ಪ್ರಥಮ ದರ್ಜೆ ಕಾಲೇಜಿನ ಆಡಳಿತ ಮಂಡಳಿಯ ಲಿಖಿತ ಮನವಿಯ ಮೇರೆಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 65(2) (3)ರಂತೆ 2019-20ನೇ ಶೈಕ್ಷಣಿಕ ಸಾಲಿನಿಂದ ಸದರಿ ಕಾಲೇಜಿನ ಸಂಯೋಜನೆಯನ್ನು ಹಿಂಪಡೆಯಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/12.9** | ವಿಶ್ವವಿದ್ಯಾನಿಲಯದ 99ನೇ ವಾರ್ಷಿಕ ಘಟಿಕೋತ್ಸವದ ಸಂಬಂಧ ದಿನಾಂಕ, ಸಮಯ, ಸ್ಥಳ ಹಾಗೂ ಮುಖ್ಯ ಅತಿಥಿಗಳನ್ನು ನಿಗಧಿಪಡಿಸುವ ಬಗೆಗೆ |
| ತೀರ್ಮಾನ | ವಿಶ್ವವಿದ್ಯಾನಿಲಯದ 99ನೇ ವಾರ್ಷಿಕ ಘಟಿಕೋತ್ಸವದ ಸಂಬಂಧ ದಿನಾಂಕ, ಸಮಯ, ಸ್ಥಳವನ್ನು ನಿಗಧಿಪಡಿಸುವ ಅಧಿಕಾರವನ್ನು ಸಿಂಡಿಕೇಟ್ ಮಾನ್ಯ ಕುಲಪತಿಗಳಿಗೆ ನೀಡಿತು ಹಾಗೂ<br>(1) ಡಾ. ಅನಿಲ್ ಸಹಸ್ರಾಬುಧೆ, ಅಧ್ಯಕ್ಷರು, ಎಐಸಿಟಿಇ, ನವದೆಹಲಿ<br>(2) ಪ್ರೊ. ಧರ್ಮಪಾಲ್ ಸಿಂಗ್, ಅಧ್ಯಕ್ಷರು, ವಿಶ್ವವಿದ್ಯಾನಿಲಯದ ಧನಸಹಾಯ ಆಯೋಗ, ನವದೆಹಲಿ<br>(3) ಪ್ರೊ. ಕೈಲಾಸವಾಡಿವೂ ಸಿವನ್, ಅಧ್ಯಕ್ಷರು, ಭಾರತೀಯ ಬಾಹ್ಯಕಾಶ ಸಂಸ್ಥೆ (ಇಸ್ರೊ), ಬೆಂಗಳೂರು.<br>(4) ಡಾ. ಕಿರಣ್ ಬೇಡಿ, ಲೆಫ್ಟಿನೆಂಟ್ ಗೌರ್ನರ್, ಪುದುಚೆರಿ<br>ಇವರಲ್ಲಿ ಒಬ್ಬರನ್ನು ಮುಖ್ಯ ಅತಿಥಿಗಳನ್ನಾಗಿ ಆಹ್ವಾನಿಸಲು ಸನ್ಮಾನ್ಯ ರಾಜ್ಯಪಾಲರಿಗೆ ಶಿಫಾರಸ್ಸು ಮಾಡಲು ತೀರ್ಮಾನಿಸಿತು. |
| **2018/12.10** | ಶ್ರೀ ಬಿ.ಎಸ್. ಶ್ರೀನಾಥ್ ಅರಸ್, ತಾಂತ್ರಿಕ ಸಹಾಯಕ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು, ಇವರು ಇಂಡೋನೇಷ್ಯಾ ದೇಶದ ಜಕಾರ್ತ ನಗರಕ್ಕೆ ಹೋಗಲು ಅನುಮತಿಸಿರುವ ಬಗ್ಗೆ. |
| ತೀರ್ಮಾನ | ಶ್ರೀ ಬಿ.ಎಸ್. ಶ್ರೀನಾಥ್ ಅರಸ್, ತಾಂತ್ರಿಕ ಸಹಾಯಕ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ದಿನಾಂಕ 20-11-2018ರಿಂದ 26-11-2018ರವರೆಗೆ ಪ್ರಯಾಣ ದಿನಗಳು ಸೇರಿ ಒಟ್ಟು ಆರು ದಿನಗಳು ಇಂಡೋನೇಷ್ಯಾ ದೇಶದ ಜಕಾರ್ತ ನಗರಕ್ಕೆ ವಿಶ್ವವಿದ್ಯಾನಿಲಯದ ಮೇಲೆ ಯಾವುದೇ ಆರ್ಥಿಕ ಹೊಣೆಗಾರಿಕೆಯೂ ಇಲ್ಲದಂತೆ ಹೋಗಿ ಬಂದಿರುವುದಕ್ಕೆ ಅನುಮತಿಸಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2018/12.11** | ಶ್ರೀ ಚಂದ್ರಶೇಖರ. ಎಂ., ಪರಿಚಾರಕ, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಇವರ ಅನಧಿಕೃತ ಗೈರುಹಾಜರಿಯ ಬಗೆಗೆ. |
| ತೀರ್ಮಾನ | ಸುದೀರ್ಘ ಚರ್ಚೆಯ ನಂತರ ಶ್ರೀ ಚಂದ್ರಶೇಖರ. ಎಂ., ಪರಿಚಾರಕ, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಮೇಲಿನ ಆರೋಪಗಳು ಸಾಬೀತಾಗಿರುವುದಕ್ಕೆ ವಿಚಾರಣಾಧಿಕಾರಿಗಳು ವರದಿಯಲ್ಲಿ ದಾಖಲಿಸಿರುವುದನ್ನು |

| | |
|---|---|
| | ಗಮನಿಸಿದ ಸಿಂಡಿಕೇಟ್ ಈ ಬಾರಿಗೆ ಕ್ಷಮಿಸಿ ಮುಂದಿನ ವೇತನಬಡ್ತಿಗಳಿಗೆ ಧಕ್ಕೆಯಾಗದಂತೆ ಎರಡು ವೇತನಬಡ್ತಿಯನ್ನು ತಡೆಹಿಡಿಯಲು ಹಾಗೂ ಸದರಿಯವರಿಗೆ ಅಂತಿಮ ಎಚ್ಚರಿಕೆ ನೀಡಿ ಮುಂದೆ ಅನಧಿಕೃತ ಗೈರುಹಾಜರಾಗಿರುವುದರ ಬಗ್ಗೆ ದೂರು ದಾಖಲಾದಲ್ಲಿ ಯಾವುದೇ ವಿಚಾರಣೆಯಿಲ್ಲದೆ ಶಿಸ್ತುಪ್ರಾಧಿಕಾರವಾದ ಸಿಂಡಿಕೇಟ್ ತೆಗೆದುಕೊಳ್ಳುವ ತೀರ್ಮಾನದಂತೆ ಕ್ರಮಕೈಗೊಳ್ಳಲು ಸಹ ಸಿಂಡಿಕೇಟ್ ತೀರ್ಮಾನಿಸಿತು. |
| **2018/12.12** | ಅಧ್ಯಯನ ಮಂಡಳಿಗಳನ್ನು ಪುನರ್ ರಚಿಸುವ ಬಗ್ಗೆ |
| **ತೀರ್ಮಾನ** | ಅಧ್ಯಯನ ಮಂಡಳಿಗಳನ್ನು ಪುನರ್ ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/12.13** | ಹಾಸನದ ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜಿನ ಹೆಸರನ್ನು ಸಂತ ಜೋಸೆಫರ ಕಾಲೇಜು ಎಂದು ಬದಲಾವಣೆ ಮಾಡುವ ಬಗ್ಗೆ. |
| **ತೀರ್ಮಾನ** | ಸರಸ್ವತಿಪುರಂ, ಸಾಲಗಾಮೆ ರಸ್ತೆ, ಹಾಸನದಲ್ಲಿನ ಕಾಲೇಜನ್ನು ಸ್ವಂತ ಕಟ್ಟಡದ ಅವಶ್ಯಕತೆಯ ಹಿನ್ನೆಲೆಯಲ್ಲಿ ಸರ್ಕಾರದ ಅನುಮತಿಯೊಂದಿಗೆ ಡೈರಿ ಸರ್ಕಲ್, ಬಿ.ಕಾಟೇಹಳ್ಳಿ, ಹಾಸನ ಇಲ್ಲಿರುವ ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲಾಗಿರುವುದನ್ನು ಗಮನಿಸಿದ ಸಭೆಯು ಹಾಸನದ ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜಿನ ಹೆಸರನ್ನು ಸಂತ ಜೋಸೆಫರ ಕಾಲೇಜು ಎಂಬ ಹೆಸರಿಗೆ ಬದಲಾವಣೆ ಮಾಡಲು ಪ್ರಾಂಶುಪಾಲರು ಮಾಡಿರುವ ಮನವಿಯನ್ನು ಪುರಸ್ಕರಿಸಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000 ಪ್ರಕರಣ 59(5)ರನ್ವಯ ಸರ್ಕಾರಕ್ಕೆ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲು ಸಿಂಡಿಕೇಟ್ ಅನುಮೋದಿಸಿತು. |
| **2018/12.14** | ಶ್ರೀ ಎಸ್.ಎ. ಉಮೇಶ, ಸಹಾಯಕ ಅಭಿಯಂತರ, ಇವರ ಹೊಸ ಪಿಂಚಣಿ (NPS) ಹಾಗೂ ಸೇವಾ ಹಿರಿತನ ಪಟ್ಟಿಯಲ್ಲಿ ಕೊನೆಯವರಾಗಿ ಪರಿಗಣಿಸಿರುವುದನ್ನು ಕೈಬಿಡುವ ಬಗ್ಗೆ. |
| **ತೀರ್ಮಾನ** | ಶ್ರೀ ಎಸ್.ಎ. ಉಮೇಶ, ಸಹಾಯಕ ಅಭಿಯಂತರರು, ವಿಶ್ವವಿದ್ಯಾನಿಲಯ ಇಂಜಿನಿಯರಿಂಗ್ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ನೀಡಿರುವ ವಿ.ವಿ.ಆದೇಶ ಸಂಖ್ಯೆ : ಇಟಿ4/119/2009-10 ದಿನಾಂಕ 12-04-2018ರಂದು ಹೊರಡಿಸಿರುವ ಆದೇಶವನ್ನು ಹಿಂಪಡೆದು ವಿ.ವಿ. ಆದೇಶ ಸಂಖ್ಯೆ: ಇಟಿ4/119/2009-10, ದಿನಾಂಕ 10-01-2017ರಲ್ಲಿ ನೀಡಿರುವಂತೆ ಯಥಾಸ್ಥಿತಿಯಲ್ಲಿ ಮುಂದುವರೆಸಲು ಹಾಗೂ ಸದರಿಯವರು 1997ರಿಂದಲೇ ವಿಶ್ವವಿದ್ಯಾನಿಲಯದ ಖಾಯಂ ಉದ್ಯೋಗಿಯಾಗಿರುವುದರಿಂದ ಇವರನ್ನು ಹಳೆಯ ಪಿಂಚಣಿ ಅಡಿಯಲ್ಲಿಯೇ ಮುಂದುವರೆಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/12.15** | School of Planning and Architecture, UOM and Centre for Science and Environment (CST), New Delhi ಇವುಗಳ ನಡುವೆ "Technical, Advisory Knowledge and Capacity, Building support for Sustainability Related Reforms in Curriculum" ವಿಷಯದಲ್ಲಿ ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ. |
| **ತೀರ್ಮಾನ** | School of Planning and Architecture, UOM and Centre for Science and Environment (CST), New Delhi ಇವುಗಳ ನಡುವೆ |

| | |
|---|---|
| | "Technical, Advisory Knowledge and Capacity Building support for Sustainability Related Reforms in Curriculum" ವಿಷಯದ ಒಡಂಬಡಿಕೆಯ ಪ್ರಸ್ತಾವನೆ ಹಾಗೂ MOU ಕರಡನ್ನು ಸಿಂಡಿಕೇಟ್ ಅನುಮೋದಿಸಿತು. |
| **2018/12.16** | ವಿಶ್ವವಿದ್ಯಾನಿಲಯ ಸೇವೆಗೆ ಖಾಯಂಗೊಳ್ಳುವ ಪೂರ್ವದಲ್ಲಿ ಕಾಲಿಕ ವೇತನ ಶ್ರೇಣಿಯಲ್ಲಿ ಸಲ್ಲಿಸಿದ ಸೇವೆಯನ್ನು ಪಿಂಚಣಿಗೆ ಪರಿಗಣಿಸುವ ಬಗ್ಗೆ. |
| **ತೀರ್ಮಾನ** | ಶ್ರೀ ಎನ್.ಚಿಕ್ಕಬೋರಯ್ಯ ಇವರು ದಿನಾಂಕ 31-01-2018ರಂದು ವಯೋನಿವೃತ್ತಿ ಹೊಂದಿದ್ದು ಇವರು ಕಾಲಿಕ ವೇತನ ಶ್ರೇಣಿಯಲ್ಲಿ ಸಲ್ಲಿಸಿದ ಹಂಗಾಮಿ ಸೇವೆಯನ್ನು ಪರಿಗಣಿಸುವಂತೆ ಅಪರ ನಿರ್ದೇಶಕರು, ಕರ್ನಾಟಕ ರಾಜ್ಯಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ ಪ್ರಾಂತೀಯ ಕಛೇರಿ, ಮೈಸೂರು ವಿಭಾಗ ಇವರು ನೀಡಿರುವ ಅಭಿಪ್ರಾಯವನ್ನು ಪರಿಶೀಲಿಸಿದ ಸಿಂಡಿಕೇಟ್ ಸದರಿಯವರು 01-12-1984ರಿಂದ 14-11-1989ರವರೆಗೆ ಕಾಲಿಕ ವೇತನ ಶ್ರೇಣಿಯಲ್ಲಿ ಸಲ್ಲಿಸಿದ ಹಂಗಾಮಿ ಸೇವೆಯನ್ನು ಪಿಂಚಣಿ ಸೌಲಭ್ಯಕ್ಕೆ ಪರಿಗಣಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/12.17** | ಡಾ. ಅರವಿಂದ ಮಾಲಗತ್ತಿ, ನಿವೃತ್ತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಹಾಗೂ ಡಾ. ಮಹೇಶ ಚಂದ್ರ ಗುರು, ಪ್ರಾಧ್ಯಾಪಕರು, ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರುಗಳ ವಿರುದ್ಧ ಚುನಾವಣಾ ನೀತಿ ಸಂಹಿತೆ ಉಲ್ಲಂಘನೆಯ ಸಂಬಂಧ ನಡೆದ ಇಲಾಖಾ ವಿಚಾರಣೆಯ ವರದಿಯನ್ನು ಸಲ್ಲಿಸಿರುವ ಬಗ್ಗೆ. |
| **Decision** | The Syndicate has gone through the Enquiry Report submitted by the Enquiry Officer Sri Ramanna, Retired District Judge in connection with the violation of the Election Code of Conduct by the Teachers Prof. Aravinda Malagatti, KIKS and Prof. Mahesha Chandra Guru, DOS in Mass Communication and Journalism of University of Mysore. Further, the Syndicate also decided to close the issue as the Disciplinary Authority has absolved them from the charges made in its report. |
| **2018/12.18** | ಶ್ರೀಮತಿ ಸಿ.ಪಿ.ಸುನೀತ, ಪ್ರಾಂಶುಪಾಲರು, ಮಹಾರಾಜ ಕಾಲೇಜು, ಮೈಸೂರು ಇವರಿಗೆ ಸಿಂಗಪೂರ್ ದೇಶಕ್ಕೆ ಹೋಗಿಬರಲು ಅನುಮತಿ ನೀಡಿದ್ದ ಬಗ್ಗೆ ಅನುಸಮರ್ಥನೆಗಾಗಿ. |
| **ತೀರ್ಮಾನ** | ಶ್ರೀಮತಿ ಸಿ.ಪಿ.ಸುನೀತ, ಪ್ರಾಂಶುಪಾಲರು, ಮಹಾರಾಜ ಕಾಲೇಜು, ಮೈಸೂರು ಇವರು ದಿನಾಂಕ 14-11-2018ರಿಂದ 20-11-2018ರವರೆಗೆ ಅವರ ಹಕ್ಕಿನಲ್ಲಿರುವ ರಜೆ ಉಪಯೋಗಿಸಿಕೊಂಡು ಸ್ವಂತ ಕೆಲಸದ ನಿಮಿತ್ತ ವಿಶ್ವವಿದ್ಯಾನಿಲಯದ ಮೇಲೆ ಯಾವುದೇ ಆರ್ಥಿಕ ಹೊಣೆಗಾರಿಕೆಯೂ ಇಲ್ಲದಂತೆ ಸಿಂಗಪುರ್ ದೇಶಕ್ಕೆ ಹೋಗಿ ಬಂದಿರುವುದಕ್ಕೆ ಅನುಮತಿಸಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |

| | |
|---|---|
| 2018/12.19 | ಡಾ. ಚೇತನ.ಹೆಚ್.ಆರ್, ಸಹಾಯಕ ಪ್ರಾಧ್ಯಾಪಕರು, ಮಹಾರಾಜ ಕಾಲೇಜು, ಮೈಸೂರು, ಇವರಿಗೆ ಅಮೇರಿಕ ದೇಶಕ್ಕೆ ಹೋಗಿಬರಲು ಅನುಮತಿ ನೀಡಿದ್ದ ಬಗ್ಗೆ ಅನುಸಮರ್ಥನೆಗಾಗಿ. |
| ತೀರ್ಮಾನ | ಡಾ. ಚೇತನ ಹೆಚ್.ಆರ್, ಸಹಾಯಕ ಪ್ರಾಧ್ಯಾಪಕರು, ಮಹಾರಾಜ ಕಾಲೇಜು, ಮೈಸೂರು ಇವರು ದಿನಾಂಕ 03-01-2019ರಿಂದ 28-01-2019ರವರೆಗೆ ಅವರ ಹಕ್ಕಿನಲ್ಲಿರುವ ರಜೆ ಉಪಯೋಗಿಸಿಕೊಂಡು ಸ್ವಂತ ಕೆಲಸದ ನಿಮಿತ್ತ ವಿಶ್ವವಿದ್ಯಾನಿಲಯದ ಮೇಲೆ ಯಾವುದೇ ಆರ್ಥಿಕ ಹೊಣೆಗಾರಿಕೆಯೂ ಇಲ್ಲದಂತೆ ಅಮೇರಿಕ ದೇಶಕ್ಕೆ ಹೋಗಿ ಬಂದಿರುವುದಕ್ಕೆ ಅನುಮತಿಸಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| 2018/12.20 | Sahaj Marg Spiritually Foundation, Bengaluru ಸಂಶೋಧನಾ ಕೇಂದ್ರದ ವಿಳಾಸವನ್ನು 1615, ಮೈದನಹಳ್ಳಿ ಕ್ರಾಸ್, ಹುಣಸೂರು ರಸ್ತೆ, ಮೈಸೂರು ಇಲ್ಲಿಗೆ ಸ್ಥಳ ಬದಲಾವಣೆ ಮಾಡುವ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಗೆ ಅನುಮೋದನೆ ಕೋರಿ. |
| ತೀರ್ಮಾನ | Sahaj Marg Spiritually Foundation, Bengaluru ಸಂಶೋಧನಾ ಕೇಂದ್ರದ ವಿಳಾಸವನ್ನು 1615, ಮೈದನಹಳ್ಳಿ ಕ್ರಾಸ್, ಹುಣಸೂರು ರಸ್ತೆ, ಮೈಸೂರು ಇಲ್ಲಿಗೆ ಸ್ಥಳ ಬದಲಾವಣೆ ಮಾಡುವ ಸಂಬಂಧ ಅನುಮತಿ ನೀಡಲು ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ಶಿಫಾರಸ್ಸನ್ನು ಸಿಂಡಿಕೇಟ್ ಅನುಮೋದಿಸಿತು. |
| 2018/12.21 | South Asia Institute of Ruprecht-Karls-Universitat Heidelberg, Germany ಅವರ ಜೊತೆ ಪರಸ್ಪರ ಸಹಕಾರದಲ್ಲಿ ಸಂಶೋಧನೆ ಮತ್ತು ವಿದ್ಯಾರ್ಥಿಗಳ / ಸಂಶೋಧಕರ ಸಂಭಾವ್ಯ ವಿನಿಮಯ ಮಾಡಿಕೊಳ್ಳುವ ವಿಷಯದಲ್ಲಿ ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯ ಮತ್ತು South Asia Institute of Ruprecht-Karls-University at Heidelberg, Germany ಅವರ ಜೊತೆ ಪರಸ್ಪರ ಸಹಕಾರದಲ್ಲಿ ಸಂಶೋಧನೆ ಮತ್ತು ವಿದ್ಯಾರ್ಥಿಗಳ/ಸಂಶೋಧಕರ ಸಂಭಾವ್ಯ ವಿನಿಮಯ ಮಾಡಿಕೊಳ್ಳುವ ವಿಷಯದ ಒಡಂಬಡಿಕೆಯ ಪ್ರಸ್ತಾವನೆ ಹಾಗೂ MOU ಕರಡನ್ನು ಸಿಂಡಿಕೇಟ್ ಅನುಮೋದಿಸಿತು. |
| 2018/12.22 | ಮೈಸೂರು ವಿಶ್ವವಿದ್ಯಾನಿಲಯದೊಡನೆ University of Mazandaran, Iran ಅವರು ಪರಸ್ಪರ ಸಹಕಾರದಲ್ಲಿ ಸಂಶೋಧಕ ಮತ್ತು ವಿದ್ಯಾರ್ಥಿಗಳ / ಸಂಶೋಧಕರ ಸಂಭಾವ್ಯ ವಿನಿಮಯ ಮಾಡಿಕೊಳ್ಳುವ ವಿಷಯದಲ್ಲಿ ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯ ಮತ್ತು University of Mazandaran, Iran ಅವರು ಪರಸ್ಪರ ಸಹಕಾರದಲ್ಲಿ ಸಂಶೋಧಕ ಮತ್ತು ವಿದ್ಯಾರ್ಥಿಗಳ / ಸಂಶೋಧಕರ ಸಂಭಾವ್ಯ ವಿನಿಮಯ ಮಾಡಿಕೊಳ್ಳುವ ವಿಷಯದ ಒಡಂಬಡಿಕೆಯ ಪ್ರಸ್ತಾವನೆ ಹಾಗೂ MOU ಕರಡನ್ನು ಸಿಂಡಿಕೇಟ್ ಅನುಮೋದಿಸಿತು. |

| | |
|---|---|
| **2018/12.23** | University of Mysore and World Pranic Healing foundation, Research Centre ಇವುಗಳ ನಡುವೆ "Assessing nutritional quality, storage studies and micro and macro nutrient in the food products subjected to pranic healing" ವಿಷಯದಲ್ಲಿ ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ. |
| ತೀರ್ಮಾನ | University of Mysore and World Pranic Healing foundation, Research Centre ಇವುಗಳ ನಡುವೆ "Assessing nutritional quality, storage studies and micro and macro nutrient in the food products subjected to pranic healing" ವಿಷಯದ ಒಡಂಬಡಿಕೆಯ ಪ್ರಸ್ತಾವನೆ ಹಾಗೂ MOU ಕರಡನ್ನು ಸಿಂಡಿಕೇಟ್ ಅನುಮೋದಿಸಿತು. |
| **2018/12.24** | University of Mysore and Technical and Vocational University of Iran ಇವುಗಳ ನಡುವೆ "Academic Exchange and Collaboration" ವಿಷಯದಲ್ಲಿ ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ |
| ತೀರ್ಮಾನ | University of Mysore and Technical and Vocational University of Iran ಇವುಗಳ ನಡುವೆ "Academic Exchange and Collaboration" ವಿಷಯದ ಒಡಂಬಡಿಕೆಯ ಪ್ರಸ್ತಾವನೆ ಹಾಗೂ MOU ಕರಡನ್ನು ಸಿಂಡಿಕೇಟ್ ಅನುಮೋದಿಸಿತು. |
| **2018/12.25** | ಪ್ರೊ. ಶೀನ ಶಶಿಕಾಂತ್ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ಪ್ರೊ. ಬಸವರಾಜು ವೈ.ಬಿ., ಅಧ್ಯಕ್ಷರು, ಪ್ರೊ. ಎಸ್.ಶಶಿಕಾಂತ್ ಅಭಿನಂದನಾ ಸಮಿತಿ, ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿನ ದತ್ತಿಯ ನಿಯಮಾನುಸಾರ ಎಲ್ಲಾ ಪ್ರಕ್ರಿಯೆಗಳನ್ನು ಪಾಲಿಸಿರುವುದರಿಂದ ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ. 20ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ, ಉಳಿದ ಶೇ. 80ರಷ್ಟು ಹಣವನ್ನು ಈ ಉದ್ದೇಶಕ್ಕಾಗಿ ಉಪಯೋಗಿಸಿಕೊಂಡು "ಪ್ರೊ. ಶೀನ ಶಶಿಕಾಂತ್ ಚಿನ್ನದಪದಕ ದತ್ತಿ ಸ್ಥಾಪನೆ" ದತ್ತಿ ಸ್ಥಾಪನೆ ಮಾಡಲು ಹಾಗೂ ದಾನಿಗಳ ಕೋರಿಕೆಯಂತೆ M.Sc. in Organic Chemistry ಸ್ನಾತಕೋತ್ತರ ಪದವಿಯಲ್ಲಿ ಅತಿ ಹೆಚ್ಚು ಅಂಕ/ಉತ್ತಮ ಗ್ರೇಡ್ ಪಡೆದು ಪ್ರಥಮ ಬಾರಿಗೆ ತೇರ್ಗಡೆಯಾದ ವಿದ್ಯಾರ್ಥಿಗೆ "ಪ್ರೊ. ಶೀನ ಶಶಿಕಾಂತ್ ಚಿನ್ನದ ಪದಕ"ವನ್ನು ಮುಂಬರುವ ಘಟಿಕೋತ್ಸವದಿಂದಲೇ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/12.26** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕವಾಗಿ ನೇಮಕಗೊಂಡು ಕಾರ್ಯ ನಿರ್ವಹಿಸುತ್ತಿರುವ 124 ಮಂದಿ ಉದ್ಯೋಗಿಗಳಿಗೆ ಮುಂದಿನ ಒಂದು ವರ್ಷದ ಅವಧಿಗೆ ಮರು ನೇಮಕ ಮಾಡಿಕೊಳ್ಳುವ ಬಗ್ಗೆ. |

| | |
|---|---|
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕವಾಗಿ ನೇಮಕಗೊಂಡು ಕಾರ್ಯ ನಿರ್ವಹಿಸುತ್ತಿರುವ 124 ಮಂದಿ ಉದ್ಯೋಗಿಗಳನ್ನು ಕರ್ತವ್ಯದಿಂದ ಬಿಡುಗಡೆಗೊಳಿಸುವಂತೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುವುದರ ಬಗ್ಗೆ ಸರ್ಕಾರವು ಆದೇಶ ನೀಡಿರುವುದನ್ನು ಗಮನಿಸಿದ ಸಿಂಡಿಕೇಟ್ ಮತ್ತೊಂದು ಅವಧಿಗೆ ತಾತ್ಕಾಲಿಕ ಆಧಾರದ ಮೇಲೆ ನೇಮಕ ಮಾಡಿರುವುದರ ಬಗ್ಗೆ ಸರ್ಕಾರಕ್ಕೆ ಸ್ಪಷ್ಟೀಕರಣ ಕೋರಿ ಪತ್ರ ಬರೆದಿದ್ದು ಈವರೆಗೆ ಯಾವುದೇ ಪ್ರತ್ಯುತ್ತರ ಬಂದಿರುವುದಿಲ್ಲವಾದ್ದರಿಂದ ದಿನಾಂಕ 12-12-2018ರಿಂದ ಜಾರಿಗೆ ಬಂದಂತೆ ಮತ್ತೊಂದು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಸರ್ಕಾರದ ಸ್ಪಷ್ಟೀಕರಣವನ್ನು ಕಾಯ್ದಿರಿಸಿ ನೇಮಕ ಮಾಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/12.27** | ದಿನಾಂಕ 22.12.2018ರಂದು ನಡೆದ ಪ್ರಥಮ ಸೆಮಿಸ್ಟರ್ ಎಂ.ಎಡ್., ಪ್ರಶ್ನೆಪತ್ರಿಕೆ ಪುನಾರಾವರ್ತನೆ ಆಗಿರುವ ಬಗ್ಗೆ. |
| ತೀರ್ಮಾನ | ದಿನಾಂಕ 22-12-2018ರಂದು ನಡೆದ ಸ್ನಾತಕೋತ್ತರ ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಪ್ರಥಮ ಸೆಮಿಸ್ಟರ್‌ನ "Introduction to Education Studies" (Q.P.Code-32601) ಎಂಬ ಪ್ರಶ್ನೆಪತ್ರಿಕೆಯು ಪುನರಾವರ್ತನೆ-ಯಾಗಿರುವುದಾಗಿ ದಿನಪತ್ರಿಕೆಯಲ್ಲಿ ಪ್ರಕಟವಾಗಿರುವುದರ ಮತ್ತು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಒಕ್ಕೂಟ ಮತ್ತು ಸಂಶೋಧಕರ ಸಂಘದ ಅಧ್ಯಕ್ಷರು ಜಂಟಿಯಾಗಿ ಸಲ್ಲಿಸಿರುವ ಮನವಿಯ ಬಗ್ಗೆ ಚರ್ಚಿಸಿದ ಸಭೆಯು ಶಿಕ್ಷಣಶಾಸ್ತ್ರ ಪರೀಕ್ಷಾ ಮಂಡಳಿಯ ಅಧ್ಯಕ್ಷರಾದ ಡಾ. ಕೆ.ಬಿ.ಪ್ರವೀಣ, ಶಿಕ್ಷಣ ಅಧ್ಯಯನ ವಿಭಾಗ ಇವರಿಂದ ಲೋಪ ಉಂಟಾಗಿರುವುದರಿಂದ ಎರಡು ವರ್ಷಗಳು ಎಲ್ಲಾ ಪರೀಕ್ಷಾ ಕಾರ್ಯಗಳಿಂದ ಹೊರಗಿಡುವುದು ಮತ್ತು ದಂಡಶುಲ್ಕವಾಗಿ ರೂ.20,000/-ಗಳನ್ನು ವಿಧಿಸಲು ಸಿಂಡಿಕೇಟ್ ತೀರ್ಮಾನಿಸಿತು ಹಾಗೂ ಈ ಪತ್ರಿಕೆಯ ಪರೀಕ್ಷೆಯನ್ನು 2019ರ ಜನವರಿ 4ರಂದು ನಡೆಸಲು ಸಿಂಡಿಕೇಟ್ ಅನುಮೋದಿಸಿತು. |
| **2018/12.28** | ದಿನಾಂಕ 12.12.2018ರಂದು ನಡೆದ 2018-19ನೇ ಶೈಕ್ಷಣಿಕ ಸಾಲಿನ 'ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳ ಆಡಳಿತ, ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿ'ಯ ಎರಡನೇ ಸಭೆಯ ನಿರ್ಣಯಗಳಿಗೆ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯುವ ಬಗ್ಗೆ (ಸಭಾ ನಡಾವಳಿಯನ್ನು ಲಗತ್ತಿಸಿದೆ). |
| ತೀರ್ಮಾನ | 2018-19ನೇ ಶೈಕ್ಷಣಿಕ ಸಾಲಿನ 'ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳ ಆಡಳಿತ, ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿ'ಯ ಎರಡನೇ ಸಭೆಯ ನಡಾವಳಿಯನ್ನು ಸಿಂಡಿಕೇಟ್ ಅನುಮೋದಿಸಿತು. |
| **2018/12.29** | CDSS, University of Mysore and Excel soft Technology, Mysuru ಇವುಗಳ ನಡುವೆ "To improve the quality of models of experiments to be incorporated in the Mobile Science Laboratory established by the University as an effort by |

| | |
|---|---|
| | CDSS to take Science to the Schools in rural area" ವಿಷಯದಲ್ಲಿ ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ. |
| ತೀರ್ಮಾನ | CDSS, University of Mysore and Excel soft Technology, Mysuru ಇವುಗಳ ನಡುವೆ "To improve the quality of models of experiments to be incorporated in the Mobile Science Laboratory established by the University as an effort by CDSS to take Science to the Schools in rural area" ವಿಷಯದ ಕರಡು ಒಡಂಬಡಿಕೆಯನ್ನು ಸಿಂಡಿಕೇಟ್ ಅನುಮೋದಿಸಿತು. |
| **2018/12.30** | Making University of Mysore as Digital University by 2020. |
| ತೀರ್ಮಾನ | The Syndicate has approved to implement the following initiatives to develop the University of Mysore as Digital University during 2020 through full utilization of the e-governance by provide training to all the employees and stakeholders in the University and also decided to meet out the expenditure in this behalf from IIDF grants and from the other source or grant available in the University:<br>1. To establish an e-governance cell in the University of Mysore and function throughout the year and to provide training to all the teaching and non-teaching staff of the University.<br>2. Approved to provide additional infrastructure to built the software package and hardware requirements like laptops and desktops, networking and band width etc., whenever required.<br>3. Digitization of the old data for the last 25 years.<br>4. To upgrade and replace the Old cameras which were installed 5 years back and also establish the Surveillance Centre at Suitable place in University Campus to view in single place at a sight. |
| **2018/12.31** | Continuation of ICAR-AICRP Centre at University of Mysore with Principal Investigator-reg. |
| ತೀರ್ಮಾನ | The Syndicate has approved to continue the research activities of ICAR-AICRP on pearl millet with the existing Principal Investigator (Dr. S.Chandranayak) up to the end of the project and also approved to provide all the necessary facilities to the Principal Investigator for smooth and efficient functioning of the Centre. |

| | |
|---|---|
| **2018/12.32** | ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿ ಆವರಣದಲ್ಲಿ ಬ್ಯಾಟರಿ ಚಾಲಿತ ಕಾರ್ಟ್ ವಾಹನಗಳನ್ನು ವಿದ್ಯಾರ್ಥಿಗಳ ಸಂಚಾರಕ್ಕೆ ಒದಗಿಸುವ ಬಗೆಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿ ಆವರಣದಲ್ಲಿ ಹಸರೀಕರಣಕ್ಕೆ ಒತ್ತು ನೀಡುವ ದೃಷ್ಟಿಯಿಂದ ಪ್ರಾರಂಭಿಕ ಹಂತದಲ್ಲಿ ಪ್ರಾಯೋಗಿಕವಾಗಿ ಮೂರು ಬ್ಯಾಟರಿ ಚಾಲಿತ ಕಾರ್ಟ್ ವಾಹನಗಳನ್ನು ವಿದ್ಯಾರ್ಥಿಗಳ/ಸಾರ್ವಜನಿಕರ ಸಂಚಾರಕ್ಕೆ ಅನುವಾಗುವಂತೆ ಖರೀದಿಸಲು ಹಾಗೂ ಸದರಿ ವಾಹನಗಳನ್ನು ಓಡಾಡುವ ಸಮಯ ನಿಗಧಿ ಹಾಗೂ ಶುಲ್ಕ /ಪಾಸ್ ವಿಧಿಸುವ ಬಗ್ಗೆ ನಿರ್ಧಾರ ತೆಗೆದುಕೊಳ್ಳುವ ಸಲುವಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲು ಸಿಂಡಿಕೇಟ್ ಅನುಮೋದಿಸಿತು |
| **2018/12.33** | ಅಧ್ಯಯನ ಮಂಡಳಿಗಳನ್ನು ಪುನರ್ ರಚಿಸುವ ಬಗ್ಗೆ. |
| ತೀರ್ಮಾನ | ಅಧ್ಯಯನ ಮಂಡಳಿಗಳನ್ನು ಪುನರ್ ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/12.34** | ಡಾ. ಎಚ್.ಎನ್.ಯಜುರ್ವೇದಿ, ನಿವೃತ್ತ ಪ್ರಾಧ್ಯಾಪಕರು, ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ ಅವರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ಕೋರಿರುವ ಬಗ್ಗೆ. |
| ತೀರ್ಮಾನ | ಡಾ. ಎಚ್.ಎನ್.ಯಜುರ್ವೇದಿ, ನಿವೃತ್ತ ಪ್ರಾಧ್ಯಾಪಕರು, ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ ಅವರನ್ನು ಒಂದು ವರ್ಷದ ಅವಧಿಗೆ ಮಾಹೆಯಾನ ರೂ. 25000/- ಗಳ ಕ್ರೋಢೀಕೃತ ಸಂಭಾವನೆಯೊಂದಿಗೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ಸಿಂಡಿಕೇಟ್ ಅನುಮೋದಿಸಿತು. |

**ಇತರೆ ವಿಷಯಗಳು:**

1. ಮಾನ್ಯ ಕುಲಪತಿಗಳಾದ ಪ್ರೊ. ಹೇಮಂತಕುಮಾರ್ ಅವರು ಮಾತನಾಡಿ IOE ಯೋಜನೆಯ ಸಂಯೋಜಕರಾಗಿ ಇದುವರೆಗೂ ಕಾರ್ಯನಿರ್ವಹಿಸಿದ್ದು ಕುಲಪತಿಗಳಾಗಿ ಅಧಿಕಾರ ವಹಿಸಿಕೊಂಡ ನಂತರ ಕಾರ್ಯದೊತ್ತಡ ಹೆಚ್ಚಾಗಿರುವುದರಿಂದ ICAR-AICRP ಪ್ರಾಜೆಕ್ಟ್‌ನಲ್ಲಿ ಪ್ರಧಾನ ಸಂಶೋಧಕರಾಗಿರುವ ಡಾ. ಎಸ್.ಚಂದ್ರನಾಯಕ್ ಅವರಿಗೆ IOE ಯೋಜನೆಯ ಉಸ್ತುವಾರಿಯನ್ನು ವಹಿಸಲು ಸಭೆಯ ಅನುಮತಿಯನ್ನು ಕೋರಿದರು.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ICAR-AICRP ಪ್ರಾಜೆಕ್ಟ್‌ನಲ್ಲಿ ಪ್ರಧಾನ ಸಂಶೋಧಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಎಸ್.ಚಂದ್ರನಾಯಕ್ ಅವರನ್ನು IOE ಯೋಜನೆಯ ಪ್ರಭಾರ ಸಂಯೋಜಕರನ್ನಾಗಿ ನೇಮಿಸಲು ಸಿಂಡಿಕೇಟ್ ಅನುಮೋದಿಸಿತು.

ಕೊನೆಯಲ್ಲಿ ಎಂಟನೇ ಸಾಮಾನ್ಯ ಸಭೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸೂಕ್ತ ಸಲಹೆಗಳನ್ನು ನೀಡಿ ತೀರ್ಮಾನ ಕೈಗೊಳ್ಳಲು ಸಹಕರಿಸಿದ ಎಲ್ಲಾ ಸದಸ್ಯರುಗಳಿಗೆ ಮಾನ್ಯ ಕುಲಪತಿಗಳು ವಂದನೆ ಸಲ್ಲಿಸಿದ ನಂತರ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿ

ಕುಲಪತಿ ಮತ್ತು ಅಧ್ಯಕ್ಷರು